# ಅಮೃತಾ ಅಭಿಲಾಷೆ



‘ಕನ್ನಡ ಚಿತ್ರರಂಗದ ಇತರ ನಟಿಯರಂತೆ, ನನಗೂ ಸಿನಿಮಾ ಬಗ್ಗೆ ನಿರೀಕ್ಷೆಯಿದೆ. ನನ್ನ ಪ್ರತಿಭೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳುವಂಥ ಕಥೆಗಳನ್ನು ನಿರೀಕ್ಷಿಸುತ್ತೇನೆ’ ಎಂದಿದ್ದಾರೆ ನಟಿ ಅಮೃತಾ ಅಯ್ಯಂಗಾರ್.

ಲವ್ ಮಾಕ್ಟೇಲ್, ಪಾಪ್‌ಕಾರ್ನ್ ಮಂಕಿ ಟೈಗರ್, ಬಡವ ರಾಸ್ಕಲ್ ಸಿನಿಮಾಗಳಲ್ಲಿ ಅಭಿನಯಿಸಿ ಉತ್ತಮ ನಟಿ ಎಂದು ಶಹಬ್ಬಾಸ್‌ಗಿರಿ ಪಡೆದುಕೊಂಡ ನಟಿ ಅಮೃತಾ, ಇದೀಗ ನಟ ಶರಣ್ ಜೊತೆ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭ, ತಮ್ಮ ವೃತ್ತಿ ಬದುಕಿನ ಕುರಿತು ತಮ್ಮ ಅಪೇಕ್ಷೆಗಳನ್ನು ಹಂಚಿಕೊಂಡಿದ್ದಾರೆ.

‘ಲವ್ ಮಾಕ್ಟೇಲ್ ಸಿನಿಮಾದಲ್ಲಿನ ನನ್ನ ಪಾತ್ರವನ್ನು ಮೂರು ವರ್ಷದ ನಂತರವೂ ಜನರು ಹೊಗಳುತ್ತಾರೆ. ಅದು ಸಾಮಾನ್ಯ ಪಾತ್ರದಂತಿಲ್ಲದೆ ನನ್ನನ್ನು ನಾನು ಅಲ್ಲಿ ತುಂಬಾ ಚೆನ್ನಾಗಿ ಬಿಂಬಿಸಿಕೊಂಡಿದ್ದ ಕಾರಣ ಜನರ ಮನದಲ್ಲಿ ಅದು ಇನ್ನೂ ಉಳಿದಿರಬಹುದು’ ಎಂದಿದ್ದಾರೆ.

ನಟ ಶರಣ್ ಅವರೊಂದಿಗೆ ನಟಿಸುತ್ತಿರುವ ಸಿನಿಮಾದಲ್ಲಿನ ಪಾತ್ರ ಕೂಡ ಲವ್ ಮಾಕ್ಟೇಲ್ ಕೊಟ್ಟ ಪ್ರಾಮುಖ್ಯವನ್ನೇ ನೀಡಲಿದೆ ಎಂದಿದ್ದಾರೆ.

‘ನನಗೆ ಅಸಾಮಾನ್ಯ ಎನಿಸುವ ಪಾತ್ರಗಳನ್ನು ಮಾಡಲು ಇಷ್ಟ. ಅಂಥ ಪಾತ್ರಗಳಲ್ಲಿ ಪರ್ಫಾರ್ಮ್ ಮಾಡಲು ಅವಕಾಶ ಸಿಗುತ್ತದೆ. ನಮ್ಮಲ್ಲಿನ ಸಾಮರ್ಥ್ಯ ತಿಳಿಯುವುದು ಕೂಡ ಅಂಥ ಅಸಾಧಾರಣ ಪಾತ್ರಗಳನ್ನು ನಿರ್ವಹಿಸಿದಾಗಲೇ’ ಎಂದು ತಮಗೂ ಅಂಥ ಸವಾಲಿನ ಪಾತ್ರದ ನಿರೀಕ್ಷೆ ಇರುವುದನ್ನು ಬಿಡಿಸಿಡುತ್ತಾರೆ.

‘ಪೂಜಾ ಹೆಗ್ಡೆ, ರಶ್ಮಿಕಾ ಮಂದಣ್ಣ, ನೇಹಾ ಶೆಟ್ಟಿ, ಕೃತಿ ಶೆಟ್ಟಿಯಂಥ ನಟಿಯರು ದಕ್ಷಿಣ ಭಾರತದ ಸಿನಿಮಾರಂಗದಲ್ಲಿ ಒಳ್ಳೊಳ್ಳೆಯ ಅವಕಾಶಗಳನ್ನು ಪಡೆಯುತ್ತಿದ್ದಾರೆ. ಆದರೆ ಕನ್ನಡ ಸಿನಿಮಾರಂಗದಲ್ಲಿ ಗಟ್ಟಿಯಾದ, ಪರ್ಫಾರ್ಮೆನ್ಸ್ ಓರಿಯಂಟೆಡ್ ಪಾತ್ರಗಳು ಕಡಿಮೆಯಿವೆ’ ಎಂದು ಬೇಸರ ಹೊರಹಾಕುತ್ತಾರೆ.

ಅಮೃತಾ ಅಯ್ಯಂಗಾರ್, ಕನ್ನಡ ಸಿನಿಮಾರಂಗಕ್ಕೆ ಕಾಲಿಟ್ಟು ಐದು ವರ್ಷಗಳು ಕಳೆದಿವೆ. ಈ ಅವಧಿಯಲ್ಲಿ ಉತ್ತಮ ನಟನೆ ನೀಡುವಂಥ ಅವಕಾಶಗಳ ಕೊರತೆಗಳ ಕುರಿತು ಮಾತನಾಡಿದ್ದಾರೆ.

‘ನಟಿಯರು ತಮಗೆ ಬಂದ ಒಂದು ಸಿನಿಮಾ ಆಫರ್ ಅನ್ನು ಬಜೆಟ್ ನೋಡಿ ನಿರ್ಧರಿಸುತ್ತಾರೆ ಎಂದು ಸಿನಿಮಾ ನಿರ್ಮಾಪಕರು ತಿಳಿದುಕೊಂಡಿದ್ದಾರೆ. ಅದೊಂದು ಕಾಲವಿತ್ತು. ಒಂದು ಸಿನಿಮಾ ಆಫರ್ ಬಂದಾಗ ಅಲ್ಲಿ ನಡೆಯುವ ಚರ್ಚೆಯ ವಿಷಯ ಹಣವೊಂದೇ ಆಗಿರುತ್ತಿತ್ತು. ಕಥೆಯ ವಿಷಯ ಪ್ರಮುಖವಾಗುತ್ತಿರಲಿಲ್ಲ. ಇನ್ನೂ ಕೆಲವು ಬಾರಿ, ‘ನಮಗೆ ನಿಮ್ಮ ಹತ್ತು ದಿನಗಳ ಡೇಟ್ ಬೇಕು. ಇದು ನಮ್ಮ ಬಜೆಟ್. ನಿಮಗೆ ಓಕೆ ಆದರೆ ಕಥೆ ಹೇಳುತ್ತೇವೆ’ ಎಂದು ನಿರ್ಮಾಪಕರು ಹೇಳುತ್ತಿದ್ದರು. ಕಥೆ ಅಲ್ಲಿ ಮುಖ್ಯವೇ ಆಗಿರಲಿಲ್ಲ. ಹಣ ಮಾಡಬೇಕು ಎನ್ನುವ ಒಂದೇ ಉದ್ದೇಶದೊಂದಿಗೆ ನಾನು ನಟಿಸುವುದಿಲ್ಲ. ಸ್ಕ್ರಿಪ್ಟ್ ಇಷ್ಟವಾಗಬೇಕು. ಆದರೆ ಪರ್ಫಾರ್ಮೆನ್ಸ್ ಆಧರಿತ ಪಾತ್ರಗಳು ಈಗಲೂ ದೊಡ್ಡ ಪ್ರಮಾಣದಲ್ಲಿ ಸೃಷ್ಟಿಯಾಗುತ್ತಿಲ್ಲ’ ಎಂದು ಸಂದರ್ಶನವೊಂದರಲ್ಲಿ ಮಾತು ಹಂಚಿಕೊಂಡಿದ್ದಾರೆ. ■